# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02

ಸಂಖ್ಯೆ: ಆ/ಪಿ.ಎಸ್.ಆರ್(ಜಿ)/2028/18-19 ದಿನಾಂಕ: 21-08-2018

**ಪರಿಷ್ಕೃತ ಕಛೇರಿ ಆದೇಶ**

-ಗೆ

ಪಾಲಿಕೆಯ ಎಲ್ಲಾ ವಲಯಗಳ ಜಂಟಿ
ಆಯುಕ್ತರು, ಎಲ್ಲಾ ಮುಖ್ಯ ಅಭಿಯಂತರರು,
ಮತ್ತು ಮುಖ್ಯ ಲೆಕ್ಕಾಧಿಕಾರಿಗಳು

ವಿಷಯ ಓ.ಎಫ್.ಸಿ. ವಿಭಾಗದಿಂದ ನಿಡುತ್ತಿರುವ ರಸ್ತೆ ಕತ್ತರಿಸುವ ಪರವಾನಿಗೆಯ ಅಧಿಕಾರದ ಪ್ರತ್ಯಾಯೋಜನೆಯನ್ನು ವಲಯ ಕಛೇರಿಯ ಮುಖ್ಯ ಅಭಿಯಂತರರುಗಳಿಗೆ ವಿಕೇಂದ್ರಿಕರಣ ಮಾಡುವ ಬಗ್ಗೆ

ಉಲ್ಲೇಖ 1. ಕಛೇರಿ ಆದೇಶ ಸಂಖ್ಯೆ ಆ/ಪಿ.ಆರ್./840/18-19 ದಿನಾಂಕ 29-06-201

************

ಓ.ಎಫ್.ಸಿ. ವಿಭಾಗದಿಂದ ನಿಡುತ್ತಿರುವ ರಸ್ತೆ ಕತ್ತರಿಸುವ ಪರವಾನಿಗೆಯ ಅಧಿಕಾರದ ಪ್ರತ್ಯಾಯೋಜನೆಯನ್ನು ಉಲ್ಲೇಖಿತ ಆದೇಶದಂತೆ ವಲಯ ಕಛೇರಿಯ ಮುಖ್ಯ ಅಭಿಯಂತರರುಗಳಿಗೆ ವಿಕೇಂದ್ರಿಕರಣ ಮಾಡುವ ಆದೇಶ ಹೊರಡಿಸಲಾಗಿರುತ್ತದೆ. ಆದರೆ ನೂತನ ವಿಕೇಂದ್ರಿಕೃತ ಆನ್-ಲೈನ್ ವ್ಯವಸ್ಥೆಯನ್ನು ಪಾಲಿಕೆಯಲ್ಲಿ ಜಾರಿಗೆ ತರದೇ ಪ್ರಸ್ತುತ ಜಾರಿಯಲ್ಲಿದ್ದ ಏಕ ಗವಾಕ್ಷಿ ಆನ್-ಲೈನ್ ವ್ಯವಸ್ಥೆಯನ್ನು ರದ್ದುಗೊಳಿಸಿರುವುದರಿಂದ ಓ.ಎಫ್.ಸಿ. ರಸ್ತೆ ಕತ್ತರಿಸುವ ಪರವಾನಿಗೆ ಪ್ರಕ್ರಿಯೆ ಸ್ಥಗಿತಗೊಂಡಿದ್ದು ಇದರಿಂದಾಗಿ ದೂರಸಂಪರ್ಕ ವಾಣಿಜ್ಯ ಕ್ಷೇತ್ರಕ್ಕೆ ಹಾನಿಯಾಗುತ್ತಿರುವುದಾಗಿ ಮತ್ತು ಪಾಲಿಕೆಗೆ ಸಹ ಆರ್ಥಿಕ ನಷ್ಟವಾಗುತ್ತಿರುವುದಾಗಿ ಹಲವಾರು ದೂರುಗಳು ಸಲ್ಲಿಕೆಯಾಗಿರುವ ಹಿನ್ನೆಲೆಯಲ್ಲಿ ಉಲ್ಲೇಖಿತ ಆದೇಶವನ್ನು ತಕ್ಷಣದಿಂದ ಹಿಂಪಡೆಯಲಾಗಿದೆ ಮತ್ತು ಜಾರಿಯಲ್ಲಿದ್ದ ಓ.ಎಫ್.ಸಿ. ಜಿ.ಐ.ಎಸ್ ಏಕ ಗವಾಕ್ಷಿ ಆನ್-ಲೈನ್ ವ್ಯವಸ್ಥೆಯಲ್ಲಿ ರಸ್ತೆ ಕತ್ತರಿಸುವ ಪರವಾನಿಗೆ ನೀಡುವ ವ್ಯವಸ್ಥೆಯನ್ನು ತಕ್ಷಣದಿಂದ ಪುನರ್ ಸ್ಥಾಪಿಸಲು ಮುಖ್ಯ ಅಭಿಯಂತರರು (ಓ.ಎಫ್.ಸಿ. ಕೋಶ)ರವರಿಗೆ ಸೂಚಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿ:

1. ಸಂಬಂಧಪಟ್ಟ ಅಧಿಕಾರಿಗಳಿಗೆ
2. ಪಾಲಿಕೆಯ ಐ.ಟಿ. ಸಲಹೆಗಾರರಿಗೆ – ಮುಂದಿನ ಕ್ರಮಕ್ಕಾಗಿ ಮತ್ತು ಪಾಲಿಕೆಯ ಜಾಲತಾಣದಲ್ಲಿ ಕಛೇರಿ ಆದೇಶವನ್ನು ಪ್ರಚುರಪಡಿಸುವುದಕ್ಕಾಗಿ.
3. ಕಛೇರಿ ಕಡತಕ್ಕೆ.